**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ182/2016**

ಸಿ.ಡಬ್ಲ್ಯೂ –23 ಪಿ.ಡಬ್ಲ್ಯೂ -11

| | | |
|---|---|---|
| ಹೆಸರು | ಃ | ಸೋಮನಾಥ |
| ತಂದೆಃಗಂಡ | ಃ | ಕಲ್ಲಯ್ಯ ಮಠ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | : | ಡೆಪ್ಯೂಟಿ ಮ್ಯಾನೆಜರ, ಎಸಬಿಐ, ಹುಬಳ್ಳಿ |
| ವಾಸಸ್ಥಳ | ಃ | ಹುಬ್ಬಳ್ಳಿ |

ದಿನಾಂಕಃ 20-02-2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>**

ಜನೆವರಿ-2009 ರಿಂದ 2014 ರ ವರೆಗೆ ನಾನು ಕಡಗಂಚಿ ಎಸಬಿಐ ಶಾಖೆಯಲ್ಲಿಕಾರ್ಯ ನಿರ್ವಹಿಸಿದ್ದೇನೆ. ಆರೋಪಿತರ ಪರಿಚಯ ಇರುವುದಿಲ್ಲ, ಚಾಸಾ-1 ರಿಂದ 3, 18 ರಿಂದ 20, 27 ರವರ ಪರಿಚಯ ಇರುತ್ತದೆ. ಉಳಿದವರ ಪರಿಚಯ ಇರುವುದಿಲ್ಲ.

ದಿ.12.10.2012 ರಂದು ಮದ್ಯ ರಾತ್ರಿ ಘಟನೆ ನಡೆದಿರುತ್ತದೆ. ರೂ.46 ಲಕ್ಷ ಹಣ, ಹಾಗೂ 4.5 ಕೆ.ಜಿ. ಬಂಗಾರ ಕಳ್ಳತನ ಆಗಿರುತ್ತದೆ. ನಾವು ಯಥಾಪ್ರಕಾರ ಕರ್ತವ್ಯಕ್ಕೆ ಹೋಗಿದ್ದು ಆಗ ಘಟನೆ ಬಗ್ಗೆ ಗೊತ್ತಾಗಿರುತ್ತದೆ. ನಮ್ಮ ಮ್ಯಾನೇಜರ ಪೋಲಿಸರಿಗೆ, ಮೇಲಾಧಿಕಾರಿಗೆ ಕರೆ ಮಾಡಿ ತಿಳಿಸಿದರು. ಪೋಲಿಸರು ನಾಯಿಗಳನ್ನು ಹಾಗೂ ಎಫಎಸಎಲ್ ರವರನ್ನು ಕರೆದುಕೊಂಡು ಬಂದಿದ್ದರು. ಎಲ್ಲ ಸಾಮಾನುಗಳು ಚಲ್ಲಾಪಿಲ್ಲಿ ಆಗಿದ್ದವು, ಸಿ.ಸಿ.ಟಿವಿ ಒಡೆದಿದ್ದವು. ಸ್ಟ್ರಾಂಗ ರೂಮನ್ನು ಒಡೆದಿದ್ದರು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**<u>ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.</u>**

ಒಟ್ಟು ರೂ.1,78,40,392/- ಗಳ ಮೊತ್ತದ ಕಳ್ಳತನ ಆಗಿರುತ್ತದೆ ಎಂದರೆ ಸರಿ. ದಿ.14.11.2013 ರಂದು ಕಲಬುರಗಿ ಸಿಪಿಐರವರು ಕರೆಯಿಸಿದ್ದರು ಎಂದರೆ ಸರಿಯಲ್ಲ. ಬಂಗಾರ ಕರಗಿಸಿದ ಗಟ್ಟಿ, ಟಾಟಾ ಸುಮೋ ವಾಹನ, ಇಚರ ವಾಹನ ಹಾಗೂ ನಗದು ಹಣ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮಹಮ್ಮದ ಖಾದೀರ ಹಾಗೂ ಮಹೆಬೂಬರವರು ಕಲಬುರಗಿಯವರು ಎಂದು ತಿಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿ.10.01.2014 ರಂದು ಸಿಪಿಐರವರು ಕಲಬುರಗಿಗೆ ಕರೆದಿದ್ದರು ಎಂದರೆ ಸರಿಯಲ್ಲ. ಆಗ ಪೋಲಿಸರು ನನ್ನ ಹೇಳಿಕೆ, ಪುರವಣಿ ಹೇಳಿಕೆ, ಮುಂದುವರೆದ ಹೇಳಿಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಶಾಖೆಗೆ ಬಂದಾಗ ಪಡೆದಿರುತ್ತಾರೆ ಎಂದು ಹೇಳುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಐ.ಎಸ್.ವಕೀಲರಿಂದಃ**

ನಮ್ಮ ಬ್ಯಾಂಕ ಕಳ್ಳತನವಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ನೋಡಿರುವುದಿಲ್ಲ. ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.